ಲೋಕೋಪಯೋಗಿ ಇಲಾಖೆಯ ಬೆಂಗಳೂರು ವಿಭಾಗದಲ್ಲಿರುವ ರಾಜ್ಯ ಹೆದ್ದಾರಿಗಳು

227 (290) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲೋಕೋಪಯೋಗಿ ಇಲಾಖೆಯ ಬೆಂಗಳೂರು ವಿಭಾಗದಲ್ಲಿರುವ ರಾಜ್ಯ ಹೆದ್ದಾರಿಗಳು ಯಾವುವು?

ಆ) ಈ ಹೆದ್ದಾರಿಗಳ ದುರಸ್ತಿ ಕಾಮಗಾರಿಗಳಿಗೆ ಟೆಂಡರ್ ಆಗಿರುವ ಮೊತ್ತವೆಷ್ಟು?ಯಾವ ಯಾವ ಗುತ್ತಿಗೆದಾರರಿಗೆ ಟೆಂಡರ್ ಆಗಿದೆ?

ಇ) ಯಲಹಂಕ-ಹಿಂದೂಪುರ ರಸ್ತೆಯ ಟೆಂಡರ್ ಆಗಿರುವ ಮೊತ್ತವೆಷ್ಟು? ಇದರಲ್ಲಿ ಗುತ್ತಿಗೆದಾರರಿಗೆ ಪಾವತಿಯಾಗಿರುವ ಹಣವೆಷ್ಟು?

ಈ) ರಸ್ತೆಯಲ್ಲಿ ಇದುವರೆವಿಗೂ ಗುಂಡಿಗಳನ್ನು ಮುಚ್ಚದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದರೆ, ಇದರ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು): ಅ) ಲೋಕೋಪಯೋಗಿ ಇಲಾಖೆಯ ಬೆಂಗಳೂರು ವಿಭಾಗದಲ್ಲಿ ಹನ್ನೆರಡು-ರಾಜ್ಯ ಹೆದ್ದಾರಿಗಳಿವೆ. ಅವುಗಳ ವಿವರ ಕೆಳಗಿನಂತಿವೆ:

1. ಬೆಂಗಳೂರು-ಹುಲಿಯೂರು ದುರ್ಗ ರಸ್ತೆ
2. ಬೆಂಗಳೂರು-ಆನೇಕಲ್, ಬನ್ನೇರುಘಟ್ಟ ರಸ್ತೆ
3. ಯಲಹಂಕ-ಹಿಂದೂಪುರ ರಸ್ತೆ
4. ಹೊಸಕೋಟೆ, ಕಾಡುಗೋಡಿ-ಆನೇಕಲ್ ರಸ್ತೆ
5. ಬೆಂಗಳೂರು-ರಾಯಲ್ ಪಾಡ ಫ್ರಂಟಿಯರ್ ರಸ್ತೆ
6. ಬೆಂಗಳೂರು-ದೇವನಹಳ್ಳಿ ನಂದಿದುರ್ಗ ರಸ್ತೆ
7. ನೆಲಮಂಗಲ-ಚಿಕ್ಕಬಳ್ಳಾಪುರ ರಸ್ತೆ
8. ಹೆಸರುಘಟ್ಟ-ಟ್ಯಾಂಕ್ ಬಂಡ್ ರಸ್ತೆ
9. ಕನಕಪುರ-ಸಂಗಮ ರಸ್ತೆ
10. ತಮಿಳುನಾಡು-ಆಂಧ್ರಪ್ರದೇಶ ರಾಜ್ಯಗಡಿ ರಸ್ತೆ
11. ಕೋಲಾರ-ಸೋಮಪುರ ರಸ್ತೆ
12. ಬೆಂಗಳೂರು-ಮೈಸೂರು ರಸ್ತೆ

ಆ) ಕೆ.ಆರ್.ಡಿ.ಸಿ.ಎಲ್. ಯಿಂದ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿ ಹೊರತುಪಡಿಸಿ, ಉಳಿದ ರಾಜ್ಯ ಹೆದ್ದಾರಿಗಳ ಮೂರು ವರ್ಷಗಳ ನಿರ್ವಹಣೆಯ ಕಾರ್ಯವನ್ನು ಪ್ಯಾಕೇಜ್ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದೆ. ಬೆಂಗಳೂರು ವಿಭಾಗದ ಗುತ್ತಿಗೆಯ ಮೊತ್ತವು ರೂ. 1092.20 ಲಕ್ಷಗಳು ಮತ್ತು ಈ ಕೆಲಸವನ್ನು ಶ್ರೀ ದುರ್ಗಾ ಕಂಸ್ಟ್ರಕ್ಷನ್ಸ್ ಇಂಜಿನಿಯರ್ಸ್ ಮತ್ತು ರೋಡ್ ಬಿಲ್ಡರ್ಸ್ ಅವರಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡಲಾಗಿದೆ.

ಇ) ಯಲಹಂಕ-ಹಿಂದೂಪರ ರಸ್ತೆಯ ಗುತ್ತಿಗೆಯ ಮೊತ್ತವು ಈ ಪ್ಯಾಕೇಜ್ ಒಟ್ಟು ಗುತ್ತಿಗೆಯ ಮೊತ್ತವಾದ ರೂ. 1092.20 ರಲ್ಲಿ ಸೇರಿದ್ದು, 30-6-2002ರ ವರೆಗೆ ಗುತ್ತಿಗೆದಾರರಿಗೆ ರೂ. 721.35 ಲಕ್ಷ ಪಾವತಿಯಾಗಿದೆ.

ಈ) ಬಂದಿದೆ.

ಉ) ಈ ರಸ್ತೆ ಕಾಮಗಾರಿಗಳನ್ನು ತುರ್ತಾಗಿ ತೆಗೆದುಕೊಳ್ಳಲು ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ.

ರಾಜ್ಯದಲ್ಲಿ ಪ್ರವಾಸೋದ್ಯಮ ಕಾಮಗಾರಿಗಳು

228 (292) ಶ್ರೀ ಕೃಷ್ಣಪ್ಪ ಎ (ದೊಡ್ಡಬಳ್ಳಾಪುರ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಪ್ರವಾಸೋದ್ಯಮ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾಗಿರುವ ಹಣ ಎಷ್ಟು? (ವರ್ಷಾವಾರು ಮಾಹಿತಿ ಕೊಡುವುದು)

ಆ) ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಪ್ರವಾಸೋದ್ಯಮಕ್ಕೆ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾಗಿರುವ ಹಣದ ವಿವರ.-

(ರೂ. ಲಕ್ಷಗಳಲ್ಲಿ)

ವರ್ಷ	ಕೇಂದ್ರ	ರಾಜ್ಯ
1999-2000	436.27	35.94
2000-2001	177.41	17.92
2001-2002	133.55	7.65

ಆ) ಕಾಮಗಾರಿಗಳನ್ನು ತೆಗೆದುಕೊಂಡ ಪ್ರವಾಸಿ ಸ್ಥಳಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.